# ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು

(ಕರ್ನಾಟಕ ಶುಶ್ರೂಷ, ದಾದಿ ಹಾಗೂ ಆರೋಗ್ಯ ಸಂದರ್ಶಕಿಯರ ಕಾಯ್ದೆ 1961ರನ್ವಯ ಸ್ಥಾಪಿತ)

☎ : 22383230

ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನ ಕಛೇರಿ,
ನಂ. 71, ನೈಟಿಂಗೇಲ್ ಟವರ್ಸ್
ಎ-ಸ್ಟ್ರೀಟ್, 6ನೇ ಅಡ್ಡರಸ್ತೆ, ಎ.ಆರ್. ಬಡಾವಣೆ
ಗಾಂಧಿನಗರ, ಬೆಂಗಳೂರು - 560 009.

ಸಂಖ್ಯೆ : ಕರಾಶುಪ / ಕರಾಶುಪ/340/2018-19 ದಿನಾಂಕ: ದಿನಾಂಕ : 08 MAR 2019

"ಸುತ್ತೋಲೆ"

ವಿಷಯ : ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ನರ್ಸಿಂಗ್ ಶಾಲೆ ಮತ್ತು ಕಾಲೇಜುಗಳಿಗೆ ಸೇವಾ ಹಿರಿತನ ಹಾಗೂ ಬೋಧನಾ ಅನುಭವ ಹೊಂದಿರುವ ಸಿಬ್ಬಂದಿಯನ್ನು ನಿಯೋಜಿಸುವ ಬಗ್ಗೆ
ಉಲ್ಲೇಖ : ನೌಕರರ ಮನವಿ

***********

ಉಲ್ಲೇಖಿತ ಪತ್ರದ ಮನವಿಯಲ್ಲಿ ಸರ್ಕಾರಿ ನರ್ಸಿಂಗ್ ಕಾಲೇಜು, ಬಿಮ್ಸ್ ಆಸ್ಪತ್ರೆ, ಬೆಳಗಾವಿಯಲ್ಲಿ ಬೋಧನಾ ಕಾರ್ಯಕ್ಕೆ ಸೇವಾ ಹಿರಿತನ ಹಾಗೂ ಬೋಧನಾ ಅನುಭವ ಹೊಂದಿರದ ಕೇವಲ ಒಂದು ವರ್ಷ ಸೇವಾ ಅವಧಿ ಪೂರೈಸಿರುವ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಭಾರತೀಯ ಶುಶ್ರೂಷ ಪರಿಷತ್ತಿನ ನಿಯಮಗಳನ್ವಯ ಸದರಿಯವರು ಬೋಧನಾ ಕಾರ್ಯಕ್ಕೆ ಅರ್ಹರಾಗಿಲ್ಲದ ಕಾರಣ ಬೋಧನಾ ಅನುಭವ ಹೊಂದಿರುವ ಸಿಬ್ಬಂದಿಯನ್ನು ನಿಯೋಜಿಸುವಂತೆ ಮನವಿ ಮಾಡಿರುತ್ತಾರೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ನರ್ಸಿಂಗ್ ಶಾಲಾ ಕಾಲೇಜುಗಳ ಶೈಕ್ಷಣಿಕ ಗುಣಮಟ್ಟವನ್ನು ನಿರ್ವಹಣೆ ಹಾಗೂ ವೃದ್ಧಿಪಡಿಸಲು ಭಾರತೀಯ ಶುಶ್ರೂಷ ಪರೀಷತ್ತಿನ ನಿಯಮಗಳನ್ವಯ ಪ್ರಾಂಶುಪಾಲರು ಮತ್ತು ಇತರ ಬೋಧಕ ವೃಂದಗಳಿಗೆ ಸೇವಾ ಹಿರಿತನ ಮತ್ತು ಬೋಧನಾ ಅನುಭವ ಹೊಂದಿರುವ ಶುಶ್ರೂಷಕರನ್ನು ನೇಮಿಸುವುದು ನಿಯಮಾನುಸರ ಸಮಂಜಸವಾಗಿರುತ್ತದೆ.ಮತ್ತು ಇದರಂತೆ ಸಿಬ್ಬಂದಿ ನಿಯೋಜಿಸುವುದು ಅತೀ ಅವಶ್ಯಕವಾಗಿರುತ್ತದೆ.

ಆದುದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ನರ್ಸಿಂಗ್ ಶಾಲಾ ಕಾಲೇಜುಗಳ ಬೋಧನಾ ಕಾರ್ಯಕ್ಕೆ ತಮ್ಮ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕರುಗಳ ಪೈಕಿ ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗ ಪೂರೈಸಿರುವ ಸಿಬ್ಬಂದಿಗಳಲ್ಲಿ ಸೇವಾ ಹಿರಿತನ ಹಾಗೂ ಬೋಧನಾ ಅನುಭವ ಹೊಂದಿರುವ ನೌಕರರನ್ನು ಬೋಧನಾ ಕಾರ್ಯಕ್ಕೆ ನಿಯೋಜಿಸುವಂತೆ ಸೂಚಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಅಧ್ಯಕ್ಷರು,
ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು,
ಬೆಂಗಳೂರು.

<u>ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:-</u>

1. ನಿರ್ದೇಶಕರು ಹಾಗೂ ಡೀನ್ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ. ಬೆಂಗಳೂರು.
2. ನಿರ್ದೇಶಕರು ಹಾಗೂ ಡೀನ್ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ. ಮೈಸೂರು.
3. ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ / ಬಳ್ಳಾರಿ / ಗುಲ್ಬರ್ಗಾ
4. ವೈದ್ಯಕೀಯ ಅಧೀಕ್ಷಕರು / ಜಿಲ್ಲಾ ಶಸ್ತ್ರ ಚಿಕಿತ್ಸಕರು, ವಿಕ್ಟೋರಿಯ ಆಸ್ಪತ್ರೆ / ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ / ಕೆ.ಆರ್. ಆಸ್ಪತ್ರೆ, ಮೈಸೂರು / ವೆನ್‌ಲಾಕ್ ಆಸ್ಪತ್ರೆ, ಮಂಗಳೂರು / ಸಿ.ಜಿ. ಆಸ್ಪತ್ರೆ, ದಾವಣಗೆರೆ / ಜಿಲ್ಲಾ ಆಸ್ಪತ್ರೆ, ತುಮಕೂರು / ಚಿತ್ರದುರ್ಗ / ಹಾವೇರಿ / ಬಳ್ಳಾರಿ / ಬೆಳಗಾವಿ / ಗುಲ್ಬರ್ಗಾ / ವಿಜಯಪುರ / ಹುಬ್ಬಳ್ಳಿ.

<u>ಪ್ರತಿಯನ್ನು ಮಾಹಿತಿಗಾಗಿ:-</u>

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿ, ಬಿಎಂಸಿಆರ್‌ಐ ಆವರಣ, ಬೆಂಗಳೂರು-02.
3. ಕಛೇರಿ ಪ್ರತಿ.